## ಚಿನ್ನದ ಸೋರಿಕೆ

ಕೆ.ಜಿ.ಎಫ್. ಗಣಿಗಳಲ್ಲಿ ಉತ್ಪಾದನೆ ಮಾಡಿದ ಚಿನ್ನದಲ್ಲಿ ಲೆಕ್ಕಕ್ಕೆ ಬಂದಿದ್ದಕ್ಕಿಂತ ಸೋರಿಕೆಯಾಗಿದ್ದೇ ಹೆಚ್ಚು ಎನ್ನುವುದು ಎಲ್ಲಾ ಕಾಲದಲ್ಲೂ ಕೇಳಿ ಬಂದ ಮಾತು. ಗಣಿಗಳಿಂದ ಯಥೇಚ್ಛವಾಗಿ ಕದ್ದ ಚಿನ್ನ ಬರುತ್ತಿತ್ತು ಎಂಬುದಕ್ಕೆ ರಾಬರ್ಟ್‌ಸನ್ ಪೇಟೆಯಲ್ಲಿ ಸಾಲು ಸಾಲು ಚಿನ್ನಾಭರಣಗಳ ಅಂಗಡಿಗಳೇ ಹಿಂಡೇ ಕಾಣುತ್ತಿದ್ದವು. ಚಿನ್ನ ಕದಿಯುವವರಿಂದ ಕನಿಷ್ಠ ಬೆಲೆಯಲ್ಲಿ ಚಿನ್ನ ಖರೀದಿಸುವ ಅಂಗಡಿಗಳ ಮೇಲೆ ಆದಾಯ ತೆರಿಗೆ ಇಲಾಖೆಯವರು ದಾಳಿ ಮಾಡುವುದು ಹಿಂದೆ ಇಲ್ಲಿ ಸಾಮಾನ್ಯವಾಗಿತ್ತು.

ಗಣಿ ಸ್ಥಗಿತಗೊಂಡ ಮೇಲೂ ಅಳಿದುಳಿದ ಚಿನ್ನದ ಕಳ್ಳತನ ಈಗಲೂ ನಿಂತಿಲ್ಲ. ಲೋಕಸಭೆ ನೇಮಿಸಿದ್ದ ಸಂಸದೀಯ ಮಂಡಳಿ ಗಣಿ ಪ್ರದೇಶದಲ್ಲಿ ಅಧ್ಯಯನ ಮಾಡಿ ಪ್ರತಿವರ್ಷ 30 ಕೋಟಿ ಮೌಲ್ಯದ ಚಿನ್ನ ಗಣಿಗಳಿಂದ ಕಳುವಾಗುತ್ತಿದೆ ಎಂದು ವರದಿಯನ್ನು ನೀಡಿದ್ದು ಚಿನ್ನ ಸೋರಿಕೆಗೆ ನಿದರ್ಶನ.

ಯಂತ್ರೋಪಕರಣಗಳನ್ನು, ಮೇಲುಸ್ತುವಾರಿ ಅಧಿಕಾರಿಗಳು, ಕಾರ್ಮಿಕರು, ಎಲ್ಲವನ್ನೂ ಸಿದ್ಧಗೊಳಿಸಿ ಕಾರ್ಯಾಚರಣೆಗೆ ಇಳಿದ.

2001 ರಲ್ಲಿ ಗಣಿ ಬಂದ್ ಆಗುವವರೆಗೂ ಅಂಕಿ ಅಂಶಗಳಂತೆ ಕೆ.ಜಿ.ಎಫ್. ಗಣಿಗಳಲ್ಲಿ ಉತ್ಪಾದನೆಯಾಗಿದ್ದು ಸುಮಾರು 800 ಟನ್ ಚಿನ್ನ. ಇದರಲ್ಲಿ ಬಹುತೇಕ ಪಾಲು ದಕ್ಕಿದ್ದು ಬ್ರಿಟಿಷರಿಗೆ. ಈ ಕಪ್ಪು ಭೂಮಿಯೊಳಗೆ ಹಳದಿ ಲೋಹದ ಜಾಡು ಹಿಡಿದ ಬಿಳಿಯರು ಹನ್ನೆರಡೂವರೆ ಸಾವಿರ ಎಕರೆ ಭೂಮಿಗೆ ಬೇಲಿ ಹಾಕಿದರು. ನೆಲದ ಮೇಲೆ ಪುಟ್ಟ ಪುಟ್ಟ ರಾಟೆಗಳ ಮೇಲೆ ಹಗ್ಗ ಕಟ್ಟಿದ ಬಕೆಟ್‌ಗಳಿಂದ ನೆಲದೊಳಗಿನ ಅದಿರು ಹೊರತರುತ್ತಿತ್ತು. ಮೊದಲಿಗೆ ಮನುಷ್ಯ ನಂತರ ಕುದುರೆಗಳನ್ನು ಹಗ್ಗ ಎಳೆಯುವುದಕ್ಕೆ ಬಳಸಲಾಗುತ್ತಿತ್ತು.

ಇಲ್ಲಿರುವ ಚಿನ್ನವನ್ನು ತ್ವರಿತವಾಗಿ ಹೊರತೆಗೆದು ಇಂಗ್ಲೆಂಡಿಗೆ ಸಾಗಿಸುವುದೇ ಮುಖ್ಯ ಉದ್ದೇಶವಿದ್ದ ಜಾನ್‌ಟೇಲರ್ ಕಂಪೆನಿಗೆ ಆಗಿನ ಬ್ರಿಟಿಷ್ ಸರ್ಕಾರದ ಪೂರ್ಣ ಬೆಂಬಲವಿತ್ತು. ಸಂಪತ್ತಿನ ಪಾಲು ಬ್ರಿಟಿಷ್ ಸರ್ಕಾರಕ್ಕೂ ರಾಯಧನ ರೂಪದಲ್ಲಿ ಸಂದಾಯವಾಗುತ್ತಿತ್ತು.

ಕೆ.ಜಿ.ಎಫ್. ಗಣಿಗಳಿಂದ ಚಿನ್ನ ತೆಗೆಯಲು ಶಕ್ತಿಯ ಬಳಕೆ ಆಗುವುದು ಸಾಧು ಎಂದುಕೊಂಡ ಸರ್ಕಾರ ಆಗಷ್ಟೇ ಪ್ರವರ್ಧಮಾನಕ್ಕೆ ಬಂದಿದ್ದ 'ಜಲ ವಿದ್ಯುತ್' ಕಡೆಗೆ ದೃಷ್ಟಿ ಹರಿಸಿತು. ಅದರ ಪರಿಣಾಮವೇ ಶಿವನ ಸಮುದ್ರ ವಿದ್ಯುತ್ ಉತ್ಪಾದನಾ ಕೇಂದ್ರದ ಸ್ಥಾಪನೆ. ಅಲ್ಲಿ ಉತ್ಪಾದನೆಯಾದ ವಿದ್ಯುತ್ ನೇರವಾಗಿ ಬಂದಿದ್ದೇ ಕೆ.ಜಿ.ಎಫ್. ಗಣಿಗಳಿಗೆ!

ಯಾಂತ್ರೀಕರಣಗೊಂಡು ರಭಸದಿಂದ ಮುನ್ನಡೆದ ಗಣಿಗಳಲ್ಲಿ ಎರಡು–ಮೂರು ಪಾಳಿಗಳಲ್ಲಿ ಕೆಲಸ ನಡೆಯುತ್ತಿತ್ತು. ದುಡಿಯಲು ತಮಿಳು–ಆಂಧ್ರ ಗಣಿ ಕಾರ್ಮಿಕರಿದ್ದರು.

ಮುಗಿಲು ಚುಂಬಿಸುವಂತೆ ಕಾಣುತ್ತಿದ್ದ ಕಬ್ಬಿಣದ ರಾಟೆಗಳಿಗೆ ಕಟ್ಟಿದ ಕಬ್ಬಿಣದ ಹಗ್ಗಗಳಿಗೆ ಹೊಂದಿದ್ದ ಬಕೆಟ್‌ಗಳಿಂದ ಚಿನ್ನದ ಅದಿರು ನಿರಂತರವಾಗಿ ನೆಲದೊಳಗಿನಿಂದ ಭೂಮಿ ಮೇಲೆ ಬರುತ್ತಿತ್ತು. ಇದಕ್ಕಾಗಿ ಕಾರ್ಮಿಕರ ತಂಡಗಳು ಅಹೋರಾತ್ರಿ ದುಡಿಯುತ್ತಿದ್ದವು.

ಉರಿಗಾಂನಿಂದ ಶುರುವಾದ ಚಿನ್ನದ ಬೇಟೆಗಾಗಿ ಸುತ್ತಲೂ ಷಾಫ್ಟ್‌ಗಳ ನಿರ್ಮಾಣವಾಗಿ ಗಣಿ ಕಾರ್ಯಾಚರಣೆ ವಿಸ್ತಾರವಾದಂತೆ ದೊಡ್ಡದೊಂದು ಪಟ್ಟಣವೇ ಮೈದಾಳಿತು. ನೀರಿನ ಮುಖವೇ ಕಾಣದ ಈ ಜಾಗಕ್ಕೆ ಹತ್ತಿರದ ಬೇತಮಂಗಲ ಕೆರೆಯಿಂದ ಶುದ್ಧೀಕರಣಗೊಂಡ ನೀರು ಬಂದಿತು. ಬೃಹತ್ ಬಂಗಲೆಗಳು ಮೇಲೆದ್ದವು. ಎಲ್ಲಾ ಸೌಲಭ್ಯಗಳೂ ಅಲ್ಲಿ ಒದಗಿಬಂದವು. ಬ್ರಿಟಿಷರ ಅನುಕೂಲಕ್ಕಾಗಿ ಸಿದ್ಧಗೊಂಡ ಈ ಊರಿನಲ್ಲಿ ಶಿಕ್ಷಣ ಸಂಸ್ಥೆಗಳು. ಕ್ರೀಡಾ ತಾಣಗಳು, ಕ್ಲಬ್–ಸ್ಕೇಟಿಂಗ್ ಅಂಗಳಗಳು ಸಿದ್ಧವಾದವು. 18 ಕುಳಿಗಳ ಗಾಲ್ಫ್ ಮೈದಾನ ಅಭಿವೃದ್ಧಿಯಾಯಿತು!

ಕಾಲುಹಾದಿಯಿಂದ ಗಾರೆ ರಸ್ತೆಗಳು ಇಲ್ಲಿ ಕಾಣಿಸಿದ್ದೂ ಅಲ್ಲದೆ ರೈಲು ಮಾರ್ಗವನ್ನೂ ಕಂಡಿತು ಕೆ.ಜಿ.ಎಫ್. ಗಣಿಗಳಲ್ಲಿ ಇಳಿದು ಬೆವರು ಸುರಿಸುವ ಕಾರ್ಮಿಕರನ್ನು ಟೇಲರ್ ಕಂಪೆನಿ ಉದ್ಯೋಗಿಗಳೆಂದೇ ಪರಿಗಣಿಸಲಿಲ್ಲ. ಅವರನ್ನು ಕೂಲಿಗಳಂತೆ ಉಪಯೋಗಿಸಿತು, ನಾನಾ ಬಗೆಯ ಕಾಯಿಲೆ ಕಸಾಲೆಗಳಿಗೆ ತುತ್ತಾಗುವ ಅವರಿಗಾಗಿ ದೊಡ್ಡಾಸ್ಪತ್ರೆಯನ್ನು ತೆರೆದ ಆಡಳಿತ ವರ್ಗ ವಾಸಕ್ಕಾಗಿ ಬಿದಿರು ತಡಿಕೆಯ ಗೂಡುಗಳನ್ನು ಕಟ್ಟಿಸಿತು. ಸರಿಯಾಗಿ ಗಾಳಿ–ಬೆಳಕು ಸಿಗದ ಬಿದಿರುಗೂಡುಗಳಲ್ಲಿ ವಾಸಿಸುವವರಿಗೆ ನೀರು–ಆಹಾರವೂ ದುಸ್ತರವಾಗಿತ್ತು.

ಚಿನ್ನಕ್ಕಾಗಿ ಸಾವಿರ ಸಾವಿರ ಮೀಟರ್ ಆಳಕ್ಕೆ ಗಣಿಗಳು ಇಳಿದವು. ನೂರಾರು ಸುರಂಗಗಳನ್ನು ಕೊರೆದು ಹಳದಿ ಲೋಹದ ಪದರಗಳನ್ನು ಕತ್ತರಿಸಿ ಪುಡಿ ಮಾಡಿ ಭೂಮಿ ಮೇಲೆ ಷಾಫ್ಟ್‌ಗಳ ಮೂಲಕ ತರಲಾಯಿತು. ಭೂಮಿಯೊಳಗೆ 60 ಡಿಗ್ರಿಯಷ್ಟು ಉಷ್ಣಾಂಶ–ನಿರಂತರವಾಗಿ ಗಾಳಿಯನ್ನು ಗಣಿಗಳೊಳಕ್ಕೆ ದೂಡುವುದು ನಡೆಯುತ್ತಿತ್ತು. ಅದೇ ರೀತಿ ಗಣಿಯೊಳಗಿನ ನೀರು ಭೂಮಿಗೆ ಪಂಪ್ ಮಾಡುವ ಪ್ರಕ್ರಿಯೆ ಕೂಡ ಎಡಬಿಡದೆ ಸಾಗುತ್ತಿತ್ತು.

ಆರಂಭದಲ್ಲಿ ಒಂದೇ ದಶಕಕ್ಕೆ 1.50,000 ಟನ್ ಅದಿರು ತೆಗೆದು ಅದರಿಂದ ಪ್ರತಿ ಟನ್‌ಗೆ 47.5 ಗ್ರಾಂ ಚಿನ್ನ ಎತ್ತಿಕೊಂಡ ಕಂಪೆನಿ ಅದೇ ಬಿರುಸಿನಲ್ಲಿ ಚಿನ್ನಕ್ಕೆ ಲಗ್ಗೆ ಹಾಕಿತು. ಹೆಚ್ಚು ಹೆಚ್ಚು ಅದಿರು ಹೊರಬಂದರೂ ಅದರಲ್ಲಿನ ಚಿನ್ನದ ಅಂಶ ಕಡಿಮೆಯಾಗುತ್ತಿತ್ತು. ಇದು ವರ್ಷದಿಂದ ವರ್ಷಕ್ಕೆ ಇಳಿಮುಖವಾಗುತ್ತಲೇ ಹೋಯಿತು.

ಚಿನ್ನದ ಮೊಟ್ಟೆ ಇಡುತ್ತಿದ್ದ ಕೋಳಿ ಬಡವಾಗುತ್ತಲೇ ಇತ್ತು. ಉತ್ತುಂಗದ ಸ್ಥಿತಿಯಲ್ಲಿದ್ದಾಗ ಕೆ.ಜಿ.ಎಫ್. ಗಣಿಗಳಲ್ಲಿ 35 ಸಾವಿರ ಕಾರ್ಮಿಕರಿದ್ದರು. ಚಿನ್ನ ಟನ್ನುಗಟ್ಟಲೆ ಉತ್ಪಾದನೆಯಾಗುತ್ತಿತ್ತು. ಟೇಲರ್ ಕಂಪೆನಿಗೆ ಬ್ರಿಟಿಷ್ ಸರ್ಕಾರಕ್ಕೆ ಇದರ ಫಲ ಸಿಗುತ್ತಿತ್ತು. ಕಾರ್ಮಿಕರಿಗೆ ತಾರತಮ್ಯ ನಿಂತಿರಲಿಲ್ಲ. ಭಾರತಕ್ಕೆ ಸ್ವಾತಂತ್ರ್ಯ ಬರುವ ಹೊತ್ತಿಗೆ ಭೂಮಿ ತಾಯಿ ಒಡಲಲ್ಲಿ ಹಳದಿ ಲೋಹ ಕಡಿಮೆಯಾಗುತ್ತಿತ್ತು.

ಕರ್ನಾಟಕ ಏಕೀಕರಣದ ಬಳಿಕ ಚಿನ್ನದ ಗಣಿಗಳು ರಾಷ್ಟ್ರೀಕರಣಗೊಂಡವು,

## ಆಳದ ಗಣಿಗಳ ಕೆ.ಜಿ.ಎಫ್.

ಅಂತರರಾಷ್ಟ್ರೀಯವಾಗಿ ಖ್ಯಾತಿ ಗಳಿಸಿರುವ ಕೋಲಾರ ಚಿನ್ನದ ಗಣಿಗಳು ವಿಶ್ವದ ಆಳವಾದ ಗಣಿಗಳಲ್ಲಿ ಸ್ಥಾನ ಪಡೆದಿವೆ.

30ಕ್ಕೂ ಹೆಚ್ಚು ಷಾಫ್ಟ್‌ಗಳನ್ನು 2500 ಎಕರೆ ಪ್ರದೇಶದಲ್ಲಿ ನಿರ್ಮಿಸಲಾಗಿರುವ ಇಲ್ಲಿ 3200 ಮೀಟರ್ ಆಳದ ಗಣಿಗಳೂ ಇವೆ (13,500 ಅಡಿಗಳು). ಕೆ.ಜಿ.ಎಫ್.ನಲ್ಲಿ 1400 ಕಿಲೋಮೀಟರ್‌ಗಳಿಗೂ ಹೆಚ್ಚು ಸುರಂಗಗಳನ್ನು ನೆಲದಾಳದಲ್ಲಿ ಕೊರೆದಿರುವುದು ಒಂದು ದಾಖಲೆ.



